Ex No. 07 /2022
ಪಿಡಬ್ಲ್ಯೂ - 01
ದಿನಾಂಕಃ 10-10-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು - ಜೆ ಡಿ ಆರ್ ಪರ ಶ್ರೀ. ವಿ ಬಿ ಟಿ ವಕೀಲರಿಂದ.**

ಆಸ್ತಿ ನಂ. 22 ಮತ್ತು 23 ನಿಮಗೆ ಹೇಗೆ ಬಂತು ಎಂದು ಹೇಳಲು ಆಗುತ್ತದೆಯಾ ಎಂದರೆ ಅದು ನಮ್ಮ ಹಿರಿಯರ ಆಸ್ತಿ ಎಂದು ನುಡಿಯುತ್ತಾರೆ. ಹಿರಿಯರಿಂದ ಬಂದ ಆಸ್ತಿ ಎಂದು ತೋರಿಸಲು ನಿಮ್ಮ ಬಳಿ ಯಾವುದಾದರೂ ದಾಖಲೆ ಇದೆಯಾ ಎಂದರೆ ಆ ಊರಿನಲ್ಲಿ ಯಾವುದೇ ದಾಖಲೆಗಳು ಇರುವುದಿಲ್ಲ. ನಿಮ್ಮ ಹೆಸರಾಗಲಿ ಅಥವಾ ನಿಮ್ಮ ಹಿರಿಯರ ಹೆಸರಾಗಲಿ ಆಸ್ತಿ ನಂ. 22 ಮತ್ತು 23 ಕ್ಕೆ ದಾಖಲಾದ ಬಗ್ಗೆ ಯಾವುದಾದರೂ ಠರಾವು ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಪೂರ್ವಕ್ಕೆ ಜಿಲಾನಿ ರಜಾಕ ರವರ ಯಾವ ಆಸ್ತಿ ಇದೆ ಎಂದರೆ ನಂ.36 ಮತ್ತು 37 ಇದೆ. ಪಶ್ಚಿಮಕ್ಕೆಃ ಪ್ರತಾಪ ಸಿಂಗ ರಜಪೂತ ರವರ ಆಸ್ತಿ ನಂ ಎಷ್ಟು ಎಂದರೆ 34 ಎಂದು ನುಡಿಯುತ್ತಾರೆ.

ಎದುರುದಾರರ ಆಸ್ತಿ ನಂಬರ ಹೇಳಲು ಆಗುತ್ತದೆಯಾ ಎಂದರೆ ಅವರ ಆಸ್ತಿಯೇ ಇಲ್ಲ ಎಂದು ನುಡಿಯುತ್ತಾರೆ. ಆಸ್ತಿ ನಂ 21 ರ ಬಗ್ಗೆ ನಿಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿ. ಎದುರುದಾರರ ಮನೆತನದವರು ನಾಗಪ್ಪ, ಸುಜಾತ, ತಿಮ್ಮಣ್ಣ, ಸಾವಿತ್ರಿ ರವರ ಆಸ್ತಿ ಸಂಖ್ಯೆಃ 21 ಎಂದರೆ ಆ ಆಸ್ತಿ ಇರುವುದೇ ಇಲ್ಲ. ನಾಗಪ್ಪ, ಸುಜಾತ, ತಿಮ್ಮಣ್ಣ, ಸಾವಿತ್ರಿ ರವರು ಯಾವ ಆಸ್ತಿಯಲ್ಲಿ ಇದ್ದಾರೆ ಎಂದರೆ 100 ಫೂಟ ರಸ್ತೆಯಲ್ಲಿ ಮನೆಯನ್ನು ಕಟ್ಟಿಕೊಂಡು ಇದ್ದಾರೆ. ಸಾವಿತ್ರಿ, ತಿಮ್ಮಣ್ಣ, ಸುಜಾತಾ, ಅಂಜನೇಯ, ನಾಗಪ್ಪ ಇವರೆಲ್ಲರೂ ಒಂದೇ ಮನೆತನದವರು ಎಂದರೆ ಸರಿ. ಎದುರುದಾರರು ವೈಹಿವಾಟು ಮಾಡುತ್ತೀರುವ ಆಸ್ತಿಯ ಚಕ್ಕಬಂದಿ ಹೇಳಲು ಆಗುತ್ತದೆಯಾ ಎಂದರೆ ಅವರು ಸರ್ಕಾರಿ ರಸ್ತೆಯನ್ನು ಒತ್ತುವರಿ ಮಾಡಿ ಮನೆ ಕಟ್ಟಿದ್ದಾರೆ. ಅಸಲು ದಾವಾ ಸಂಖ್ಯೆ 14/2017 ರಲ್ಲಿ ತೋರಿಸಿದ ಆಸ್ತಿ ನಂ. 22 ಮತ್ತು 23 ರಲ್ಲಿ ತೋರಿಸಿದ ಚಕ್ಕಬಂದಿಯಲ್ಲಿ ಸದರಿ ಆಸ್ತಿಗಳು ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಇರುತ್ತದೆ ಎಂದು ನುಡಿಯುತ್ತಾರೆ.

ಆಸ್ತಿ ನಂ. 22 ಮತ್ತು 23 ಪೂರ್ವ ಪಶ್ಚಿಮ 50 ಅಡಿ, ಉತ್ತರ ದಕ್ಷಿಣ 50 ಅಡಿ ಇದೆ ಎಂದು ತೋರಿಸಲು ನಿಮ್ಮ ಬಳಿ ದಾಖಲೆಗಳು ಇದೆಯಾ ಎಂದರೆ ಇರುತ್ತದೆ. ಯಾವ ಯಾವ ದಾಖಲೆಗಳು ಇವೆ ಎಂದರೆ ಕಂದಾಯ ತುಂಬಿದ ದಾಖಲೆ ಮತ್ತು ಉತಾರ ಇದೆ. ನೀವು ಸಲ್ಲಿಸಿದ ದಾಖಲಾತಿಗಳಲ್ಲಿ ನೀವು ಹೇಳಿದ ಹಾಗೆ ಯಾವುದೇ ಅಳತೆ ನಮೂದು ಮಾಡಿಲ್ಲ ಎಂದರೆ ಸಾಕ್ಷಿಯು ದಾಖಲೆಯನ್ನು ಪರಿಶೀಲಿಸಿ ನಮೂದು ಮಾಡಿದ್ದಾರೆ ಎಂದು ನುಡಿಯುತ್ತಾರೆ. ನೀವು ಸಲ್ಲಿಸಿದ

ನಿಪಿ - 4 ಮತ್ತು 5 ರಲ್ಲಿ ನೀವು ಹೇಳಿದ ಹಾಗೆ ಯಾವುದೇ ಅಳತೆ ನಮೂದು ಮಾಡಿಲ್ಲ ಎಂದರೆ ಸಾಕ್ಷಿಯು ದಾಖಲೆಯನ್ನು ಪರಿಶೀಲಿಸಿ ನಮೂದು ಮಾಡಿದ್ದಾರೆ ಎಂದು ನುಡಿಯುತ್ತಾರೆ. ಆಸ್ತಿ ನಂ. 22 ಮತ್ತು 23 ಅಸ್ತಿತ್ವದಲ್ಲಿ ಇರುವುದಿಲ್ಲ ಮತ್ತು ಮತ್ತು ನೀವು ಕಟ್ಟಡ ಕಟ್ಟುವ ಪ್ರಶ್ನೆಯೇ ಇರುವುದಿಲ್ಲ ಎಂದರೆ ಸರಿಯಲ್ಲ. ಆಸ್ತಿ ನಂ. 21 ರ ಚಕ್ಕ ಬಂದಿ ತೋರಿಸಿ ಆಸ್ತಿ ನಂ. 22 ಮತ್ತು 23 ಕ್ಕೆ ಆದೇಶವನ್ನು ಪಡೆದಿರುತ್ತೀರಿ ಎಂದರೆ ಸರಿಯಲ್ಲ.

ದುರ್ಗಾದೇವಿ ದೇವಸ್ಥಾನದ ದಕ್ಷಿಣಕ್ಕೆ ಯಾರ ಆಸ್ತಿ ಇದೆ ಎಂದರೆ ಅದು ನಮ್ಮ ಸಾಲಿನ ಆಸ್ತಿಯಲ್ಲಿ ಬರುವುದಿಲ್ಲ. ದುರ್ಗಾದೇವಿ ದೇವಸ್ಥಾನಕ್ಕೆ ಹೊಂದಿಕೊಂಡು ನಿಮ್ಮ ಯಾವುದೇ ಆಸ್ತಿ ಇರುವುದಿಲ್ಲ ಎಂದರೆ ಸರಿ. ಮುಂದುವರೆದು 3 ಪೂಟು ರಸ್ತೆ ಇರುತ್ತದೆ. ನರೇಂದ್ರ ದೇವಸೂರ, ಚೆನ್ನಪ್ಪ ದೇವಸೂರ ಇವರ ಆಸ್ತಿಗೆ ಹೊಂದಿಕೊಂಡು ಪಶ್ಚಿಮಕ್ಕೆ ನಿಮ್ಮ ಆಸ್ತಿ ಸಂಖೆ: 22 ಮತ್ತು 23 ಇರುವುದಿಲ್ಲ ಎಂದರೆ ಸರಿ. ನಾಗಪ್ಪ ಮತ್ತು ಅವರ ಸಂಬಂಧಿಕರಾದ ಸಾವಿತ್ರಿ, ತಿಮ್ಮಣ್ಣ, ಸುಜಾತಾ, ಅಂಜನೇಯ ರವರ ಆಸ್ತಿಗೆ ಹೊಂದಿಕೊಂಡು ನಿಮ್ಮ ಆಸ್ತಿ ನಂ. 22 ಮತ್ತು 23 ಇರುವುದಿಲ್ಲ ಎಂದರೆ ಸರಿ.

ಆಸ್ತಿ ನಂ. 22 ಮತ್ತು 23 ಅಸ್ತಿತ್ವದಲ್ಲೇ ಇರುವುದಿಲ್ಲ ಎಂದರೆ ಸರಿಯಲ್ಲ. ಅದನ್ನು ಪರಿಶೀಲಿಸಲು ನ್ಯಾಯಾಲಯದಿಂದ ಯಾವುದಾದರೂ ಕೋರ್ಟ ಕಮೀಷನರ ನೇಮಕ ಮಾಡಿದ್ದಲಿ ನಿಮ್ಮದು ಯಾವುದೇ ತಕಾರಾರು ಇರುವುದಿಲ್ಲ ಎಂದರೆ ಸರಿ. ಆಸ್ತಿ ನಂ. 22 ಮತ್ತು 23 ಗೇ ನೀವು ಮಾಲೀಕರು ಅಲ್ಲ, ಸದರಿ ಆಸ್ತಿ ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು